ಶ್ರೀ ಪಿ. ವೆಂಕಟರಮಣ.—ಬಹುಶಃ ಇನ್ನು ಮುಂದೆ ಆ ರೀತಿಯಾಗದಂತೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ ಮತ್ತು ಸಮಯಕ್ಕೆ ಸರಿಯಾಗಿ ಹಣವನ್ನು ಖರ್ಚು ಮಾಡಬೇಕೆಂದು ನಾನ ಸಂಬಂಧಪಟ್ಟವರಿಗೆ ಸೂಚನೆಯನ್ನು ಕೊಡುತ್ತೇನೆ. ಇನ್ನು ಮುಂದೆ ಆ ರೀತಿಯಾಗುವುದಕ್ಕೆ ಅವಕಾಶ ವನ್ನು ಕೊಡುವುದಿಲ್ಲ.

ಶ್ರೀ ಹೆಚ್.ಟಿ.ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಇಂತಹ ಲೋಪದೋಷಗಳು ಕೇವಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಆಗಿಲ್ಲ. ಎಲ್ಲಾ ಜಿಲ್ಲೆಗಳ ಅಂಕಿ ಅಂಶಗಳನ್ನು ಮಾನ್ಯ ಮಂತ್ರಿಯವರು ತರಿಸಿಕೊಂಡು ನೋಡಿದರೆ ಅದು ಗೊತ್ತಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಆಗಲೇ ಉತ್ತರವನ್ನು ಹೇಳಿದ್ದಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಾನು ಸರ್ಕಾರದಿಂದ ಉತ್ತರ ನಿರೀಕ್ಷೆ ಮಾಡಿದ್ದೆ. ಈ ಗಿರಿಜನರ ಕಲ್ಯಾಣ ಒಂದು ಜಿಲ್ಲೆಗೆ ಮಾತ್ರ ಸೀಮಿತವಾದ ಪ್ರಶ್ನೆಯಲ್ಲ. ಇಂತಹ ಲೋಪದೋಷಗಳು ಈ ವರ್ಷ ಮಾತ್ರವಲ್ಲ, ಪ್ರತಿ ವರ್ಷವೂ ಈ ರೀತಿ ನಡೆದುಕೊಂಡು ಬರುತ್ತಿದೆ. ಆದ್ದರಿಂದ ಇದನ್ನು ಅಂತಿಮ ವಾಗಿ ನಿವಾರಣೆ ಮಾಡುವುದಕ್ಕೆ ಸರ್ಕಾರ ಏನಾದರೂ ವ್ಯವಸ್ಥೆ ಮಾಡುತ್ತದೆಯೇ ? ಈ ರೀತಿ ವ್ಯವಸ್ಥೆ ಯನ್ನು ಮಾಡುವುದಕ್ಕೆ ಸರ್ಕಾರ ಕಲ್ಪನೆ ಏನಾದರೂ ಹೊಂದಿದೆಯೇ ?

ಶ್ರೀ ಪಿ. ವೆಂಕಟರಮಣ.—ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ಎಲ್ಲಾ ಜಿಲ್ಲೆಗಳಿಗೂ ಸೀಮಿತ ವಾದ ಪ್ರಶ್ನೆ. ಬಹುಶಃ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ಇದು ಎಲ್ಲರಿಗೂ ಅನ್ವಯವಾಗುತ್ತದೆ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಆದರೆ ಪ್ರತಿಯೊಂದು ಜಿಲ್ಲೆಯಲ್ಲೂ ಎಲ್ಲಿ ಗಿರಿಜನರು ಇರುತ್ತಾರೋ ಅಲ್ಲಿಗೆ ಮಾತ್ರ ಈ ಯೋಜನೆ ಸೀಮಿತವಾಗಿರುತ್ತದೆ.

ಅಧ್ಯಕ್ಷರು.—೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದ್ದರೂ ಸಹ ಬರೀ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಉಳಿದ ಹಣವನ್ನು ಏತಕ್ಕೆ ಲ್ಯಾಪ್ಸ್ ಮಾಡಿದ್ದೀರಿ ಎನ್ನುವ ದೃಷ್ಟಿ ಯಿಂದ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಶ್ರೀ ಪಿ. ವೆಂಕಟರಮಣ.—ನಾನು ಈಗಾಗಲೇ ಈ ವಿಚಾರದ ಬಗ್ಗೆ ಅನೇಕ ಕಾರಣಗಳನ್ನು ಕೊಟ್ಟಿದ್ದೇನೆ. ಇನ್ನು ಮುಂದೆ ಈ ರೀತಿಯಾಗದಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

Destruction of Survey Record by fire at Naragund

178 SRI V. V. PATTAR (Jamkhandi)—Will the Minister for Revenue be pleased to state :—

(a) whether it is a fact that City Survey records were destroyed by fire at Naragund recently ;

(b) if so, the steps taken by the Government to reconstruct the records by resorting to Survey ?

SRI MALLIKARJUNA M. KHARGE (Minister for Revenue)—

(a) Yes.

(b) The proposal to take up a resurvey is under consideration of Government,

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಅಧ್ಯಕ್ಷರೇ, ನರಗುಂದದಲ್ಲಿ ಸುಟ್ಟುಹೋದ ಸರ್ವೆ ರೆಕಾರ್ಡ್ ಗಳ ಮೇಲೆ ಕಲಹಗಳು ಜಾಸ್ತಿಯಾಗಿ ಕೋರ್ಟಿಗೆ ಕೇಸುಗಳು ಹೋಗುತ್ತಿರುವುದು ಜಾಸ್ತಿಯಾಗಿವೆ. ಮತ್ತು ಇದೇ ರೇಕಾರ್ಡ್‌ಗಳ ಮೇಲೆ ಆಪರ ಹಕ್ಕು ಸಾಧನೆ ಮಾಡುವ ಕೆಲಸ ಸಹ ನಡೆಯುತ್ತಿದೆ. ಇಂತಹ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಅತಿ ಶೀಘ್ರವಾಗಿ ಅಂದರೆ ಇನ್ನು ಒಂದು ತಿಂಗಳು ಒಳಗಾಗಿ ಸರ್ವೆ ರೇಕಾರ್ಡ್‌ಗಳನ್ನು ರಚನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡು ತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ವಿಷಯವನ್ನು ಈಗಾಗಲೇ ನನ್ನ ಗಮನಕ್ಕೆ ತಂದಿದ್ದಾರೆ. ಮತ್ತು ಸಂಬಂಧಪಟ್ಟ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ಹತ್ತಿರ ಈ ಬಗ್ಗೆ ಪ್ರೊಪೋಜಲ್ಸ್ ಕೂಡ ಇದೆ. ಇದಕ್ಕೆ ೩,೬೫,೦೦೦ ರೂಪಾಯಿಗಳು ಖರ್ಚು ಬರುತ್ತದೆ. ಎಕಾನಮಿ ಆರ್ಡರ್ ಜಾರಿಗೆ ಬಂದಿದ್ದರಿಂದ ಸ್ವಲ್ಪ ಕಾಲ ಇದನ್ನು ಅವರು ತಡೆ ಮಾಡಿದ್ದಾರೆ. ಆದಷ್ಟು ಬೇಗ ಈ ವಿಚಾರವನ್ನು ಪರಿಶೀಲನೆ ಮಾಡಿ ಸೂಕ್ತವಾಗಿ ಕೆಲಸ ಮಾಡಲು ನಾನು ಪ್ರಯತ್ನ ಮಾಡುತ್ತೇನೆ.

Pickups sanctioned in B.R. Project

373 SRI H. SHIVAPPA (Harihar)—Will the Minister of State for Major and Medium Irrigation be pleased to state :—

(a) Number of pickups sanctioned in B.R. Project ;

(b) the progress of Bevinahalla pickup in Harihar Taluk ?

SRI B. B. CHIMMANAKATTI (Minister of State for Major and Medium Irrigation)—

(a) 51.

(b) Administrative approval and Technical sanction has been given to the estimate for pickup across Bevinahalla near old Salakatte village. Agency is being fixed to start the work.

ಶ್ರೀ ಹೆಚ್. ಶಿವಪ್ಪ.— ಮಾನ್ಯ ಅಧ್ಯಕ್ಷರೇ, ಭದ್ರಾ ಜಲಾಶಯದಲ್ಲಿ ಮಂಜೂರಾಗಿರತಕ್ಕ ಒಟ್ಟು ಒಡ್ಡುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಯವರು ೫೧ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ಒಟ್ಟು ೫೧ ಒಡ್ಡುಗಳು ಯಾವ ಯಾವ ಹಂತದಲ್ಲಿ ಇವೆ ಎಂಬುದನ್ನು ಸರ್ಕಾರದವರು ತಿಳಿಸುತ್ತಾರೆಯೇ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಭದ್ರಾ ಜಲಾಶಯದಲ್ಲಿ ಸುಮಾರು ೭೩ ಪಿಕ್ ಅಪ್‌ಗಳು ಆಗಬೇಕೆಂದು ಈ ಬಗ್ಗೆ ಪ್ರೊಪೋಜಲ್ಸ್ ಸರ್ಕಾರದ ಮುಂದೆ ಇದ್ದು, ಇದರಲ್ಲಿ ಸುಮಾರು ೫೧ ಒಡ್ಡುಗಳಿಗೆ ಮಂಜೂರಾತಿ ಸಿಕ್ಕಿದೆ. ಈಗಾಗಲೇ ಸುಮಾರು ೧೦ ಒಡ್ಡುಗಳ ಎಲ್ಲಾ ಕೆಲಸ ಮುಗಿದಿದೆ. ಮೇಲಾಗಿ ಇದರಲ್ಲಿ ಸುಮಾರು ೨೪ ಪಿಕ್-ಅಪ್‌ಗಳ ಕೆಲಸ ಸಹ ಮುಗಿದಿದೆ. ಇನ್ನು ೧೭ ಪಿಕ್-ಅಪ್‌ಗಳ ಕೆಲಸ ಬೇರೆ ಬೇರೆ ಹಂತದಲ್ಲಿ ಇವೆ. ಈ ೧೭ ಪಿಕ್-ಅಪ್‌ಗಳ ಕೆಲಸ ಪೂರ್ತಿಯಾದರೆ ಒಟ್ಟು ೫೧ ಒಡ್ಡುಗಳ ಕೆಲಸ ಮುಗಿದಂತೆ ಆಗುತ್ತದೆ.

ಶ್ರೀ ಹೆಚ್. ಶಿವಪ್ಪ. ಈ ಬೇವಿನಹಳ್ಳಿದ ಪಿಕ್-ಅಪ್‌ಗೆ ಯಾವಾಗ ತಾಂತ್ರಿಕ ಹಾಗೂ ಆಡಳಿತಾತ್ಮಕ ಮಂಜೂರಾತಿ ದೊರೆಯಿತು? ಅದು ಈಗ ಯಾವ ಹಂತದಲ್ಲಿ ಇದೆ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ನಮ್ಮ ಎಸ್ಟಿಮೇಟ್ ಪ್ರಕಾರ ಸುಮಾರು ೭.೧೭ ಲಕ್ಷ ರೂಪಾಯಿಗಳು ತಾಂತ್ರಿಕವಾಗಿ, ಆಡಳಿತಾತ್ಮಕವಾಗಿ ಸ್ಯಾಂಕ್ಷನ್ ಆಗಿದೆ ದಿನಾಂಕ ೨೮-೬-೧೯೮೦ರಲ್ಲಿ ಅದಕ್ಕೆ ತಾಂತ್ರಿಕ ಮಂಜೂರಾತಿ ದೊರೆತಿವೆ, ಆಡಳಿತಾತ್ಮಕ ಮಂಜೂರಾತಿ ೧೯೮೧ರಲ್ಲಿ ದೊರೆಯಿತು. ಈಗ ಟೆಂಡರ್ ಡ್ರಾಪ್ಟ್‌ನ್ನು ಚೀಫ್ ಇಂಜಿನೀಯರ್‌ರವರಿಗೆ ನಾವು ರೆಫರ್ ಮಾಡಿದೆ ೇವೆ. ಅದು ಅಲ್ಲಿಂದ ಬಂದ ತಕ್ಷಣ ಟೆಂಡರ್ ಕಾಲಘಾರ್ ಮಾಡಿ ಕೆಲಸ ಮಾಡುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಹೆಚ್. ಶಿವಪ್ಪ.— ಎಷ್ಟು ವರ್ಷಗಳಲ್ಲಿ ನೀವು ಈ ಕೆಲಸವನ್ನು ಮುಗಿಸುತ್ತೀರಿ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಆ ಕೆಲಸದ ವಿಧಾನವನ್ನು ನೋಡಿಕೊಂಡು ಆದಷ್ಟು ಬೇಗ ಪಿಕ್-ಅಪ್ ಕೆಲಸಗಳನ್ನು ಮುಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

Bifurcation of Fist Grade College Hassan into Science and Arts Colleges.